ನೆತ್ತಿಯಿಂದ ಕಾಲವರೆಗಿನ ಎಲ್ಲ ಅವಯವಗಳು ಕಂಪನ ಸುಖಕ್ಕೆ ಈಡಾಗಿ ಬೆವರಾಗಿ ಹರಿದುಬಿಟ್ಟಿದ್ದರು.

ಅವಳ ಸ್ವರಾಲಾಪ ಮುಗಿದು ಮೆಲ್ಲನೆ ಕಣ್ತೆರೆದಳು. ಸ್ವರ್ಗದ ದೇವತೆಯಂತಿರುವ ಅವಳ ಮುಖದಲ್ಲಿ ಕಣ್ಣುಗಳಿಂದ ಹರಿದಿದ್ದ ಕಂಬನಿಯ ಪಲುಕುಗಳಿದ್ದವು. ಅವಳು ಕಣ್ತೆರೆದು ಒಮ್ಮೆ ಗುರುಗಳತ್ತ ನೋಡಿದಳು. ಕಿರುನಗೆಯೊಂದನ್ನು ಸೂಸಿ, 'ಗುರೂಜಿ, ನಾನೀಗ ಮನೆಗೆ ಹೋಗಬೇಕಿದೆ' ಎಂದು ನಡೆದು ಬಿಟ್ಟಳು. ಗುರುವಾದ ತನಗೂ ಅದೇ ಬೇಕಿತ್ತು! ಏನೂ ಉತ್ತರಿಸಿರಲಿಲ್ಲ.

ಇನ್ನೆಂದು ಅವರು ಅವಳನ್ನು ಆ ಠುಮ್ರಿಯನ್ನು ಹಾಡ ಹೇಳಲಿಲ್ಲ. ಅವಳನ್ನು ಹಿಂದೂಸ್ತಾನಿ ಗಾಯನದ ತುಮ್ರಿಯ ಮಹಾರಾಣಿಯಾಗಿಸುತ್ತೇನೆಂದಿದ್ದ ಅವರ ಕನಸನ್ನು ಮರೆತವರಂತೆ ವರ್ತಿಸತೊಡಗಿದರು. 'ಯಾದ್ ಪಿಯಾಕಿ ಆಯೆ' ಇರಲಿ... ಇನ್ಯಾವ ಭಾವ ಪ್ರಧಾನ ಬಂದಿಶ್‌ಗಳನ್ನು ಠುಮ್ರಿಗಳನ್ನು ಅವಳಿಂದ ಹಾಡಿಸಲಿಲ್ಲ. ಅವಳ ಹಾಡುಗಾರಿಕೆಯ ಮಡುವಿನಲ್ಲಿ ತಾವೆಲ್ಲಿ ಕಳೆದು ಹೋಗುತ್ತೇವೋ ಮುಳುಗಿ ಹೋಗುತೀವೋ ಎಂಬ ಭೀತಿಯಲ್ಲಿ ಬದುಕ ತೊಡಗಿದರು. ಆಮೇಲಾಮೇಲೆ ಅವಳಿಗೆ ಕಲಿಸುವಂಥದ್ದು ತಮ್ಮ ಬಳಿ ಏನೂ ಇಲ್ಲ. ಅವಳಿಗೆ ಸಂಗೀತ ಕಲಿತುಕೊಳ್ಳುವ ಸರಕಲ್ಲವೇ ಅಲ್ಲ ಎನಿಸಿಬಿಟ್ಟಿತು. ಅವಳ ಶರೀರ, ಕಂಠ, ಚಿತ್ತ, ಹೃದಯ... ಎಲ್ಲವೂ ಸಂಗೀತವೆನಿಸಿಬಿಟ್ಟಿತವರಿಗೆ.

ಅವರ ಬಹುನಿರೀಕ್ಷೆಯ ಕಾಯುವಿಕೆಗೆ ಉತ್ತರವೆಂಬಂತೆ ಅವಳು ಬಂದಳು.

ಬಂದವಳೇ ಚರಣರಜವನ್ನು ನೆತ್ತಿಯ ಮುಂದುಗಡೆ ಇಟ್ಟುಕೊಂಡು ಕೆಳಗೆ ಕುಳಿತುಕೊಳ್ಳುತ್ತಾ,

'ಗುರೂಜಿ... ಇವತ್ತು ಪಾಠಕ್ಕಾಗಿ ಬರಲಿಲ್ಲ. ನಿಮ್ಮ ಬಳಿ ಮಾತಾಡಬೇಕೆಂದೇ ಬಂದಿರುವೆ' ಎಂದವಳನ್ನು ನೋಡುತ್ತಾ ಸುಮ್ಮನುಳಿದವರನ್ನು ಉತ್ತೇಜಿಸುವವರಂತೆ–

'ಗುರೂಜಿ, ನಿಮಗೆ ಈ ನಿಮ್ಮ ಘರಾಣದ ಉತ್ತರಾಧಿಕಾರಿ ಬೇಕಿತ್ತು. ಅದಕ್ಕಾಗಿ ನನ್ನನ್ನು ಆರಿಸಿದಿರಿ. ಸೊಸೆಯಾಗು ಎಂದಿದ್ದು ಒಂದು ನೆಪ. ಒಂದೊಮ್ಮೆ ನಿಮಗೊಬ್ಬ ಮಗನಿಲ್ಲದಿದ್ದರೆ ಏನು ಮಾಡುತ್ತಿದ್ದಿರಿ? ನನ್ನನ್ನು ಹೋಗಗೊಡುತ್ತಿದ್ದಿರಾ?' ಎಂದಳು.

'ಆ ಕುರಿತು ನಾನು ಯೋಚಿಸಲಿಲ್ಲ' ಎಂದರು ಮೆಲ್ಲಗೆ.

'ಗುರುಮಹಾರಾಜ್... ಸ್ವಲ್ಪ ಅರ್ಥಮಾಡಿಕೊಳ್ಳಿ... ನಿಮಗೆ ಹೇಗೆ ಘರಾಣವನ್ನು ಮುಂದುವರಿಸುವ ವಾರಿಸ್ ಬೇಕೋ ನನಗೂ ಇಂತಹ ಪ್ರತಿಷ್ಠಿತ ಘರಾಣ ಬೇಕು. ನನ್ನ ಅಸ್ಮಿತೆಯನ್ನು ಕಂಡುಕೊಳ್ಳಲು. ಗಾಯಕವಾಡರ ಗ್ವಾಲಿಯರ್ ಘರಾಣದ ಮಾಲಕಿ ಎಂಬ ಹೆಮ್ಮೆ ನೀನಾ ಚೌಧರಿ ಎಂಬ ನನಗೂಬೇಕು. ಆದರೆ ಅದು ಲೌಕಿಕ. ಅದರಾಚೆಗೆ ನಮ್ಮಿಬ್ಬರ ಸಂಬಂಧಕ್ಕೆ ಒಂದು ನಿಯತಿಯಿದೆ ಅನ್ನಿಸುವುದಿಲ್ಲವೆ?' ಎಂದಳು. ಗಾಯಕವಾಡರು ಅಚ್ಚರಿಯಿಂದ, 'ನಮ್ಮಿಬ್ಬರ ಸಂಬಂಧ ಅದ್ಯಾವ ತೆರನಾದ್ದು? ನಾನು ಗುರು ನೀನು ಶಿಷ್ಯೆ ಅಷ್ಟೆ' ಎಂದವರನ್ನೇ ಖೇದದಿಂದ ನೋಡುತ್ತಾ.

'ನಟಿಸಬೇಡಿ ಗುರೂಜಿ, ಕಡೆಯ ಪಕ್ಷ ನನ್ನ ಮುಂದೆ ನಾನು ನಿಮ್ಮ ಶಿಷ್ಯೆಯೆನ್ನುವುದು ಲೌಕಿಕದ ಮಾತು. ನನಗೆ ಏನೂ ಗೊತ್ತಿಲ್ಲವೆಂದುಕೊಂಡರೆ ಅದು ನಿಮ್ಮ ಮೂರ್ಖತನ. ನಾನು ಹಾಡಿದ ಠುಮ್ರಿಗೆ ನಿಮ್ಮ ಶರೀರ ಪ್ರತಿಕ್ರಿಯಿಸಿದ ಪರಿ ನನಗೆ ಗೊತ್ತಿಲ್ಲವೆಂದುಕೊಂಡಿರಾ? ಆ ದಿನ ನಾ ಹಾಡಿದ್ದು ನಿಮ್ಮನ್ನು ಮನಸ್ಸಲ್ಲಿಟ್ಟುಕೊಂಡೇ ಎಂದರೆ ನಂಬಬೇಕು. ನಿಮ್ಮ ಕಣ್ಣೆದುರು ಕುಳಿತಾಗಲೂ ನಾನು ನಿಮ್ಮ ನೆನಪು, ಧ್ಯಾನಗಳಲ್ಲಿದ್ದೇನೆಂದರೆ ಏನರ್ಥ ಗುರೂಜಿ?